ಎತ್ತಿರುತ್ತಾರೆ. ಈ ಬಗ್ಗೆ ಕುಂದಾಪುರದ ಅಸಿಸ್ಟೆಂಟ್ ಕಮೀಷನರ್‌ರವರನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸಂಪರ್ಕಿಸಿ, ತಕರಾರಿನ ನಿವಾರಣೆಗಾಗಿ ಕ್ರಮ ಕೈಗೊಳ್ಳುತ್ತಿದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ ನಂತರ ಸುಮಾರು ಒಂದು ವರ್ಷದ ಅವಧಿಯಲ್ಲಿ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಇ) ಉಡುಪಿ ತಾಲ್ಲೂಕು ಹೇರಾಡಿ ಗ್ರಾಮದ ವ್ಯಾಪ್ತಿಗೆ ಒಳಪಡುವ ರಂಗನಕೆರೆ ಎಂಬಲ್ಲಿ ಒಂದು 220 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ವಿಷಯದಲ್ಲಿ ಒಂದು ತಾಂತ್ರಿಕಾ ವರದಿಯನ್ನು ಸಿದ್ಧಪಡಿಸಿ ನಿಗಮದ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುವುದು. ನಿಗಮದ ತಾಂತ್ರಿಕ ಸಮಿತಿಯು ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು.

ಉಡುಪಿ ತಾಲ್ಲೂಕಿನ ಮಧುವನ ಎಂಬಲ್ಲಿ ವಿದ್ಯುಚ್ಛಕ್ತಿ ಸಬ್ ಸ್ಟೇಷನ್ ನಿರ್ಮಾಣ

4460 - ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಮಧುವನ ಎಂಬಲ್ಲಿ ವಿದ್ಯುಚ್ಛಕ್ತಿ ಸಬ್ ಸ್ಟೇಷನ್ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು ಎಂದು? ಅದರ ಅಂದಾಜು ವೆಚ್ಚದ ಮೊತ್ತ ಎಷ್ಟು?

ಆ) ಸದರಿ ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಸದರಿ ಕಾಮಗಾರಿಯು ಈಗ ಯಾವ ಹಂತದಲ್ಲಿದೆ ಮತ್ತು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಮಧುವನದಲ್ಲಿ ಒಂದು 110 :33 :11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸಲು ನಿಗಮವು ನವೆಂಬರ್-99ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ315 ಲಕ್ಷ ರೂಪಾಯಿಗಳು.

ಆ) ಇಲ್ಲ.

ಇ) ಮತ್ತು ಈ) ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಮಧುವನ (ವಡ್ಡರ್ಸೆ ಗ್ರಾಮದಲ್ಲಿ)ದಲ್ಲಿ ಸ್ಥಾಪಿಸಲಾಗುವ ವಿದ್ಯುತ್ ಸಬ್ ಸ್ಟೇಷನ್‌ಗೆ ಬೇಕಾಗುವ ಭೂಮಿಯನ್ನು (ಸರ್ವೆ ನಂ. 114: 3, ವಿಸ್ತೀರ್ಣ 3.78 ಎಕರೆ) ಸ್ವಾಧೀನಪಡಿಸಿಕೊಳ್ಳಲು ಅಸಿಸ್ಟೆಂಟ್ ಕಮೀಷನರ್, ಕುಂದಾಪುರ ರವರಿಗೆ

ಪ್ರಸ್ತಾವನೆಯನ್ನು ಕಳುಹಿಸಿ ಕೊಡಲಾಗಿತ್ತು. ಅಸಿಸ್ಟೆಂಟ್ ಕಮೀಷನರ್ ಕುಂದಾಪುರ ರವರು ಮೇ-99ರಲ್ಲಿ ಭೂಮಿಯ ಮೌಲ್ಯದ ಶೇಕಡ 25ರಷ್ಟು (ರೂ. 4,96,795-00) ಠೇವಣಿಯಿಡಲು ತಿಳಿಸಿದರು. ಅದೇ ಪ್ರಕಾರ ಈ ಠೇವಣಿ ಹಣವನ್ನು ಸೆಪ್ಟೆಂಬರ್ - 99ರಲ್ಲಿ ಪಾವತಿಸಲಾಯಿತು. 4(1) ಸೂಚನೆಯನ್ನು ಉಡುಪಿ ಜಿಲ್ಲಾಧಿಕಾರಿಯವರು ಉದಯವಾಣಿ ದಿನಪತ್ರಿಕೆಯಲ್ಲಿ ದಿನಾಂಕ3.1.2000 ರಲ್ಲಿ ಮೇಲೆ ತಿಳಿಸಿದ ಭೂಮಿಯ ಸ್ವಾಧೀನ ಪಡೆದುಕೊಳ್ಳಲು ಪ್ರಕಟಣೆ ಹೊರಡಿಸಿದರು. ಆದರೆ ಭೂ ಮಾಲೀಕರು ಭೂಮಿಯ ಸ್ವಾದೀನ ಪಡಿಸಿಕೊಳ್ಳುವ ಮೌಲ್ಯದ ಬಗ್ಗೆ ತಕರಾರನ್ನು ಎತ್ತಿರುತ್ತಾರೆ. ಈ ಬಗ್ಗೆ ಕುಂದಾಪುರದ ಅಸಿಸ್ಟೆಂಟ್ ಕಮೀಷನರ್‌ರವರನ್ನು ಕ.ವಿ.ಪ್ರ.ನಿ.ಸಿ.ಯು ಸಂಪರ್ಕಿಸಿ, ತಕರಾರಿನ ನಿವಾರಣೆಗಾಗಿ ಕ್ರಮ ಕೈಗೊಳ್ಳುತ್ತಿದೆ. ಈ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ ನಂತರ ಸುಮಾರು ಒಂದು ವರ್ಷದ ಅವಧಿಯಲ್ಲಿ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಕೆರೆಗಳು

4461 - ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು?

ಆ) ಅವುಗಳು ಸುಸ್ಥಿತಿಯಲ್ಲಿವೆಯೇ? ಅವುಗಳ ಪೈಕಿ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು?

ಇ) ದುಸ್ಥಿತಿಯಲ್ಲಿರುವ ಕೆರೆಗಳ ಅಭಿವೃದ್ಧಿ ಪಡಿಸುವಿಕೆಯ ಯೋಜನೆಗಳ ವಿವರಗಳೇನು? ಸದರಿ ಯೋಜನೆಗಳನ್ನು ಸದರಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ?

ಈ) ಜಿಲ್ಲೆಗಳಲ್ಲಿ ದೇವಸ್ಥಾನಗಳ ಕೆರೆಗಳನ್ನು ಹೂಳು ತೆಗೆಯಿಸಿ ಆಯಾಯ ಪ್ರದೇಶದ ಊರುಗಳ ಬಾವಿಗಳಲ್ಲಿ ಅಂತರ್ಜಲ ಅಭಿವೃದ್ಧಿಗೆ ಅನುವು ಮಾಡಿಕೊಡಲು ಶೀಘ್ರ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವುದೆ?

ಉ) ರಾಜ್ಯದಲ್ಲಿ ಕೆರೆಗಳ ಅಭಿವೃದ್ಧಿ ಯೋಜನೆಗಳು ಯಾವುವು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸಣ್ಣ ನೀರಾವರಿಗೆ ಸಂಬಂಧಿಸಿದಂತೆ ಆರು ಕೆರೆಗಳು ಇರುತ್ತವೆ.

ಆ) ಅವುಗಳು ಪೂರ್ಣ ಪ್ರಮಾಣದ ಸುಸ್ಥಿತಿಯಲ್ಲಿಲ್ಲ. ಈ ಎಲ್ಲಾ ಕೆರೆಗಳು (ಆರು) ನೀರಾವರಿ ಕೆರೆಗಳಾಗಿರುತ್ತದೆ.

ಇ) ಸಾಧ್ಯವಿಲ್ಲ. ಮುಂದಿನ ವರ್ಷದ ಆಯವ್ಯಯದಲ್ಲಿ ಸೇರಿಸಿ ಕೈಗೆತ್ತಿಕೊಳ್ಳಲು ಪ್ರಯತ್ನಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎರಡು ಕೆರೆಗಳ ಸಂಪೂರ್ಣ ಅಭಿವೃದ್ಧಿಯನ್ನು ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ.